## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** – 109/2026 **PW**–1

**ದಿಃ 06.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಾದ ಶ್ರೀ ಜಂಗಮನಿರವರಿಂದಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ಅರ್ಜಿಗೆ ಸಂಬಂಧಿಸಿದಂತೆ ಎಫಐಆರನ ಟ್ರೂ ಕಾಫಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಪಿ 1 ಎಂದು, ದೂರಿನ ಟ್ರೂ ಕಾಫಿಯನ್ನು ನಿಶಾನೆ ಪಿ 2 ಎಂದು, ದೂರುದಾರರ ಮರು ಹೇಳಿಕೆಯ ಟ್ರೂ ಕಾಫಿಯನ್ನು ನಿಶಾನೆ ಪಿ 3 ಎಂದು, ಅಪರಾಧ ವಿವರಣೆ ನಮೂನೆಯ ಟ್ರೂ ಕಾಫಿಯನ್ನು ನಿಶಾನೆ ಪಿ 4 ಎಂದು, ಎರಡು ವಾಹನ ಅಮಾನತು ಪಂಚನಾಮೆಯ ಟ್ರೂ ಕಾಫಿಗಳನ್ನು ನಿಶಾನೆ ಪಿ 5 ಮತ್ತು ನಿಶಾನೆ ಪಿ 6 ಎಂದು, ಐಎಂವಿ ವರದಿಯ ಟ್ರೂ ಕಾಫಿಯನ್ನು ನಿಶಾನೆ ಪಿ 7 ಎಂದು, ಅಂತಿಮ ವರದಿಯ ಟ್ರೂ ಕಾಫಿಯನ್ನು ನಿಶಾನೆ ಪಿ 8 ಎಂದು, ಗಾಯದ ಪ್ರಮಾಣ ಪತ್ರದ ಟ್ರೂ ಕಾಫಿಯನ್ನು ನಿಶಾನೆ ಪಿ 9 ಎಂದು, ಎಂ.ಎಲ್.ಸಿ ಇಂಟಿಮೇಷನ ಟ್ರೂ ಕಾಫಿಯನ್ನು ನಿಶಾನೆ ಪಿ 10 ಎಂದು, ನಾಲ್ಕು ಓಪಿಡಿ ಚೀಟಿಗಳನ್ನು ಒಟ್ಟಾಗಿ ನಿಶಾನೆ ಪಿ 11 ಎಂದು, ಒಟ್ಟು 14 ಮೆಡಿಕಲ್ ಬಿಲ್ ಗಳನ್ನು ಒಟ್ಟಾಗಿ ನಿಶಾನೆ ಪಿ 12 ಎಂದು, ನಾಲ್ಕು ಏಕ್ಸರೆಗಳನ್ನು ಒಟ್ಟಾಗಿ ನಿಶಾನೆ ಪಿ 13 ಎಂದು, ನೋಟರಿಯವರು ದೃಢೀಕರಿಸಿದ ಡಿಎಲ್, ಆರ್.ಸಿ ಇವುಗಳನ್ನು ನಿಶಾನೆ ಪಿ 14 ಮತ್ತು ನಿಶಾನೆ ಪಿ 15 ಎಂದು ಗುರ್ತಿಸಲಾಯಿತು.

(2 ನೇ ಎದುರುದಾರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಿ ಮುಂದುಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ